# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

**ಸಿ.ಸಿ ನಂ. 284/2017**

ಸಿ.ಡಬ್ಲ್ಯೂ -51

ಪಿ.ಡಬ್ಲ್ಯೂ -17

ಹೆಸರು : ಬಾಸು

ತಂದೆ:ಗಂಡ : ಡೊಂಗರು ಚವಾಣ

ವಯಸ್ಸು : 45 ವರ್ಷ

ಉದ್ಯೋಗ : ಪಿಐ, ಬಿಎಸಫಿ ಕಲಬುರಗಿ

ವಾಸಸ್ಥಳ : ಕಲಬುರಗಿ

ದಿನಾಂಕ:19.02.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ದಿ.26.05.2015 ರಿಂದ 28.02.2017 ರವರೆಗೆ ಸಿಪಿಐ ಎಂದು ಆಳಂದ ವೃತ್ತ ಕಚೇರಿಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ.19.07.2019 ರಂದು ಚಾಸಾ-42 ರವರಿಂದ ಕಡತವನ್ನು ಸ್ವಿಕರಿಸಿ ಪರಿಶೀಲಿಸಿರುತ್ತೇನೆ. ನಂತರ ಕಲಬುರಗಿ ಜಿಲ್ಲಾಸ್ಪತ್ರೆ ಶವಾಗಾರಕ್ಕೆ ಭೇಟಿ ನೀಡಿ ಮೃತ ಫುಲಚಂದ ರವರ ಶವವನ್ನು ಚಾಸಾ-3 ಮತ್ತು 4 ರವರ ಸಮಕ್ಷಮ ಶವಪಂಚನಾಮೆ ಮಾಡಿರುತ್ತೇನೆ. ಮೃತ ದೇಹವನ್ನು ಶವಪರಿಕ್ಷೆಗಾಗಿ ಕಳುಹಿಸಿರುತ್ತೇನೆ. ಅದೇ ದಿನ ಮೃತರಾದ ಗಜ್ಜಾಬಾಯಿ ಗಂಡ ಶ್ರೀಮಂತ ಇಂಗಳೆರವರ ಶವ ಪಂಚನೆಮಯನ್ನು ಚಾಸಾ-2 ರಿಂದ 4 ರವರ ಸಮಕ್ಷಮ ಮಾಡಿರುತ್ತೇನೆ. ನಂತರ ಶವಪರಿಕ್ಷೆಗಾಗಿ ಮೃತ ದೇಹವನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ-45 ರವರಿಂದ ಮೌಲಿ ಅಲಿಯಾಸ ಕೃಷ್ಣ ಬಳಿರಾಮರವರ ಶವಪಂಚನಾಮೆ ಮಾಡಲು ಆದೇಶ ನೀಡಿರುತ್ತೇನೆ. ಅವರು ಶವಪಂಚನಾಮೆ ಮಾಡಿ ಶವಪರಿಕ್ಷೆ ಮಾಡಿಸಿರುತ್ತಾರೆ. ಅದೇ ದಿನ ಚಾಸಾ-44 ರವರು ಮೃತ ಸಂಜಯ ತಂದೆ ಶಿವಾಜಿ ಇಂಗಳೆ ಮತ್ತು ಕೃಷ್ಣ ತಂದ ಸಂಜಯ ಇಂಗಳೆರವರ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಚಾಸಾ-49 ರವರು ಸರ್ಜಾಬಾಯಿ ಗಂಡ ಪಂಡರಿ ಆಳಂದೆ ಮತ್ತು ಶ್ರೀಮತಿ ಕಾಂತಾಬಾಯಿ ಶಿವಾಜಿ ಇಂಗಳೆರವರ ಶವ ಪಂಚನಾಮೆ ಮಾಡಿ ಶವಪರಿಕ್ಷೆಗೆ ದೇಹವನ್ನು ಸಲ್ಲಿಸಿರುತ್ತಾರೆ. ಚಾಸಾ-50 ರವರು ವರ್ಷಾ ಗಂಡ ಪ್ರಭಾಕರ ಡೋಬಳೆ, ಸ್ವಪ್ನಿಲ್ ತಂದೆ ಪ್ರಭಾಕರ ಡೋಬಳೆ ಇವರ ಶವ ಪಂಚನಾಮೆ ಮಾಡಿ ಶವಪರಿಕ್ಷೆಯನ್ನು ಮಾಡಿರುತ್ತಾರೆ. ಮೃತ ದೇಹವನ್ನು ಸಂಬಂಧಿಕರಿಗೆ ಸಲ್ಲಿಸಿರುತ್ತಾರೆ. ದಿ.20.07.2016 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-15, 16 ರವರ ಸಮಕ್ಷಮ 10.00 ರಿಂದ 11.00 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತೇವೆ. ಸ್ಥಳದಿಂದ ಎಂಎಚ್-12/ಎಲಟಿ-7368 ಲಾರಿ ಮತುತ ಎಂಎಚ-28/ಆರ-4583 ಕ್ರೂಸರ ವಾಹನಗಳನ್ನು ಐಎಂವಿಗಾಗಿ ವಶಪಡಿಸಿಕೊಳ್ಳಲಾಯಿತು. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿದೆನು. ಅದೇ ದಿನ ಸರ್ಕಾರಿ ಆಸ್ಪತ್ರೆ ಕಲಬುರಗಿಗೆ ಭೇಟಿ ನೀಡಿ ಗಾಯಾಳುಗಳಾದ ಚಾಸಾ-18 ರಿಂದ 20 ಹಾಗೂ ವೆಂಕಟರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಯುನೈಟೆಡ ಅಸ್ಪತ್ರೆಗೆ ಭೇಟ ನೀಡಿ ಚಾಸಾ-21, 22 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಕಚೇರಿಗೆ ಬಂದು ಚಾಸಾ-23, 24, 25 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.21.07.2016 ರಂದು ಸಿಬ್ಬಂದಿಗಳಾದ ಚಾಸಾ-39, 47 ಹಾಗೂ ಪ್ರಶಾಂತ, ಚಾಸಾ-40, 46, ಚಂದ್ರಾಮ ಸಿಪಿಸಿ-629, 48, 43 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿ.25.07.2016 ರಂದು ಆರೋಪಿಯನ್ನು ದಸ್ತಗೀರಿ ಮಾಡಿ ದೂರುದಾರರಿಗೆ ಹಾಗೂ ಸಾಕ್ಷಿದಾರರಿಗೆ ತೋರಿಸಿದ್ದು ಅವರು ಗುರುತಿಸಿರುತ್ತಾರೆ. ಸದರಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಅದೇ ದಿನ ಅಪಘಾತವಾದ ವಾಹನಗಳ ಐಎಂವಿ

ಪರಿಕ್ಷೆಯನ್ನು ಮಾಡಿಸಿ ನಂತರ ಎಂಎಚ-12/ಎಲಟಿ-7368 ಲಾರಿಯನ್ನು ಪವರ ಆಫ ಅಟಾರ್ನಿ ಹೋಲ್ಡರರವರಿಂದ ದಾಖಲಾತಿ ಪಡೆದು ಹಾಗೂ ಇಂಡಿಮನಿಟಿ ಬಾಂಡ ಪಡೆದು ವಾಹನ ಬಿಡುಗಡೆ ಮಾಡಲಾಯಿತು. ಅದೇ ದಿನ ಫಿರ್ಯಾದಿ, ಚಾಸಾ-18, 19, 20, 17, 23 ರಿಂದ 26 ರವರ ಮುಂದುವರೆದ ಹೇಳಿಕೆ ಪಡೆದಿರುತ್ತೇನೆ. ದಿ.19.8.2016 ರಂದು ಚಾಸಾ-27,28 ರವರ ಹೇಳಿಕೆ ಪುರವಣಿ ಹೇಳಿಕೆ ಪಡೆದಿರುತ್ತೇನೆ. ಕ್ರೂಸರ ಮಾಲೀಕನಾದ ಹರಿರಾಮರವರಿಂದ ಇಂಡಿಮನಿಟಿ ಬಾಂಡ ಪಡೆದು ವಾಹನ ಬಿಡುಗಡೆ ಮಾಡಲಾಯಿತು. ಅದೇ ದಿನ ಮೃತರಾದ ಮೌಲಿ ಅಲಿಯಾಸ ಕೃಷ್ಣ , ಫೂಲಚಂದ, ಗಜ್ಞಾಬಾಯಿ, ಸಂಜಯ, ಕೃಷ್ಣ ತಂದೆ ಸಂಜಯ, ಸರ್ಜಾಬಾಯಿ, ಕಾಂತಾಬಾಯಿ, ವರ್ಷಾ ಹಾಗೂ ಸ್ವಪ್ನಿಲ್ ರವರ ಪಿಎಂ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ.26.08.2016 ರಂದು ವಾಹನಗಳ ಐಎಂವಿ ವರದಿ ಪಡೆದಿರುತ್ತೇನೆ, ಅದೇ ದಿನ ಗಾಯಾಳುಗಳಾದ ಕುನಾಲ, ಚಾಸಾ-27, 21, ಅಭಿಜಿತ, 28, 19, ಸಮೀಕ್ಷಾ, 22, ಚಾಸಾ-1, ಪಾಂಡುರಂಗ, ಮೌಲಿ, 20, 17, 18 ರವರ ಗಾಯದ ಪ್ರಮಾಣ ಪತ್ರ ಯುನೈಟೆಡ ಅಸ್ಪತ್ರೆ ಕಲಬುರಗಿಯಿಂದ ಪಡೆದಿರುತ್ತೇನೆ. ದಿ.03.12.2016 ರಂದು ಆರೋಪಿತರ ವಿರುದ್ಧ ದೊ.ಪ. ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ನಿಪಿ-14 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-3 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಫೂಲಚಂದರವರ ಶವವನ್ನು ಪರಿಕ್ಷ್ಣಗೆ ಸಲ್ಲಿಸಿದ ವರದಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ವರದಿಯನ್ನು ನಿಪಿ-35, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-15 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-4 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಗಜ್ಞಾಬಾಯಿಯವರ ಶವವನ್ನು ಪರಿಕ್ಷೆಗೆ ಸಲ್ಲಿಸಿದ ವರದಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ವರದಿಯನ್ನು ನಿಪಿ-36, ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-16 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-18 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-18 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-19 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-20 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-21 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-22 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-11 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಐಎಂವಿ ವರದಿಯನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ವರದಿಯನ್ನು ನಿಪಿ-37, ಸಾಕ್ಷಿಯ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-15 ರಿಂದ 28 ನ್ನು ತೋರಿಸಿ ಅದರಲ್ಲಿರುವ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-15(ಎ) ರಿಂದ 28(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲುಃ- ಆರೋಪಿತರ ಪರ ಆರ್.ಜೆ.ಪಿ. ವಕೀಲರಿಂದಃ**

ಚಾಸಾ-1 ರವರು ಉಸ್ಮಾನಾಬಾದ ಜಿಲ್ಲೆಯವರು ಎಂದರೆ ಸರಿ. ಅವರಿಗೆ ಮರಾಠಿಯನ್ನು ಹೊರತು ಬೇರೆ ಭಾಷೆ ಬರಬಹುದು ಎಂದರೆ ಸರಿ. ಚಾಸಾ-1 ರವರು ಮರಾಠಿಯಲ್ಲಿ ಹೇಳಿರುವುದನ್ನು ಅವರಿಗೆ ಪರಿಚಯದವರಾದ ರಾಣುಜಿ ತಂದೆ ಲಕ್ಷ್ಮಣರಾವರವರು ಕನ್ನಡಕ್ಕೆ ಅನುವಾದ ಮಾಡಿ ಹೇಳಿರುತ್ತಾರೆ. ಚಾಸಾ-1 ರವರು ಮರಾಠಿಯಲ್ಲಿದೂರನ್ನು ನೀಡಿರುವುದಿಲ್ಲ ಅವರು ಹೇಳುವಾಗ ಮರಾಠಿಯಲ್ಲಿ ಹೇಳಿರುತ್ತಾರೆ. ರಾಣುಜಿರವರಿಗೆ ಎರಡು ಭಾಷೆಗಳು ಬರುತ್ತವೆ ಎಂದು ನಾನು ತಿಳಿದುಕೊಂಡಿರುತ್ತೇನೆ ಆದರೆ ದಾಖಲೆ ಪಡೆದಿರುವುದಿಲ್ಲ. ರಾಣುಜಿರವರಿಗೆ ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ. ಅದೇ ರೀತಿ ಅಪ್ಪಣ್ಣ ಪಿಸಿರವರನ್ನು ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ. ರಾಣುಜಿರವರು ಧೃಡಿಕೃತ ಅನುವಾದಕಾರರರು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಅನುವಾದ ಮಾಡುವ ಅಧಿಕಾರ ರಾಣುಜಿರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಲಾರಿ ನರೋಣಾ ಕಡೆಯಿಂದ ಆಳಂದ ಕಡೆಗೆ ಬರುವ ದಾರಿಯಲ್ಲಿ ನಿಂತಿತ್ತು ಕ್ರೂಸರ ಅದಕ್ಕೆ ಡಿಕ್ಕಿಯಾಗಿ ಪಕ್ಕದಲ್ಲಿ ನಿಂತಿತ್ತು. ಅಪಘಾತವಾದ ನಂತರ ಎರಡೂ ವಾಹನಗಳು ಎಡಗಡೆಗೆ ಇದ್ದವು. ಲಾರಿ ಕಲಬುರಗಿಯಿಂದ ಬರುವ ಮಾರ್ಗದಲ್ಲಿ ಎಡಗಡೆ ಬರುತ್ತಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಲಾರಿ ಮಧ್ಯದಲ್ಲಿ ಬಂದು ಡಿಕ್ಕಿಪಡಿಸಿ ನಂತರ ಪಕ್ಕದಲ್ಲಿ ಹೋಗಿರುತ್ತದೆ ಎಂದು ಹೇಳುತ್ತಾರೆ. ಕ್ರೂಸರ ತಳ್ಳಿಕೊಂಡು ಬಂದು ಅಪಘಾತವಾಗಿ ಆಳಂದದಿಂದ ಹೋಗುವ ಬಲಗಡೆಗೆ ನಿಂತಿತ್ತು. ನಾನು ಅಪಘಾತ ಸ್ಥಳಕ್ಕೆ ಹೋದಾಗ ಅಪಘಾತದ ಸಮಯದಲ್ಲಿ ಬ್ರೇಕ ಮಾರ್ಕಗಳು ಕಂಡು ಬಂದಿರುವುದಿಲ್ಲ. ಆಳಂದ ಕಲಬುರಗಿ ರಸ್ತೆ ಪೂರ್ವ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ. ಅಪಘಾತವಾದ ಸ್ಥಳದಲ್ಲಿ ಎಸ್ ಆಕಾರದ ತಿರುವು ಇದೆ ಎಂದರೆ ಸರಿ. ಅದಕ್ಕೆ ಡೋಗಿಬಂದ ನಾಲಾ ಎಂದು ಹೆಸರಿದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಲಾಡ ಚಿಂಚೋಳಿ ತಾಂಡಾಕ್ಕೆ ಹೋಗುವ ಬಸ ನಿಲ್ದಾಣ ಇದೆ ಎಂದರೆ ಮೇಲೆ **60-70** ಮೀಟರಗಳ ಅಂತರದ ನಂತರ ಇದೆ ಎಂದು ಹೇಳುತ್ತಾರೆ. ಅಪಘಾತವಾದ ಸ್ಥಳದಲ್ಲಿ ಒಂದು ಮಠ ಇದ ಎಂದರೆ ಸಾಕ್ಷಿ ಅಪಘಾತವಾಗುವ ಸಮಯದಲ್ಲಿ ಇರಲಿಲ್ಲ ಈಗ ಆಗಿದೆ ಎಂದು ಹೇಳುತ್ತಾರೆ. ಬಸ ನಿಲ್ದಾಣ ಇರುವ ಕಾರಣ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಕೆಲವು ವಾಹನಗಳು ಚಲಿಸುತ್ತವೆ ದೊಡ್ಡ ಬಸ ನಿಲ್ದಾಣ ಇರುವುದಿಲ್ಲ ಎಂದು ಹೇಳುತ್ತಾರೆ. ಬಸ ನಿಲ್ದಾಣ ಇರುವ ಕಾರಣ ರಸ್ತೆಯ ಎರಡು ಬದಿಗೆ ರಸ್ತೆ ಹಂಪ್ಸ ಇವೆ ಎಂದರ ನನಗೆ ನೆನಪಿಲ್ಲ. ಬಸ ನಿಲ್ದಾಣ, ರಸ್ತೆ ಹಂಪ್ಸ ಇರುವ ಕಾರಣ ಎಲ್ಲ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರ ಸರಿಯಲ್ಲ. ಕ್ರೂಸರನಲ್ಲಿ ಎಷ್ಟು ಜನ ಪ್ರಯಾಣ ಮಾಡುತ್ತಿದ್ದರು ಎಂದರೆ ಚಾಲಕನ ಸಮೇತ **21** ಜನರು ಪ್ರಯಾಣ ಮಾಡುತ್ತಿದರು. ಚಿಕ್ಕ ಮಕ್ಕಳು ಸುಮಾರು **7-8** ಜನರು ಇದ್ದಿರಬಹುದು. ಕ್ರೂಸನಲ್ಲಿ **1+14** ಜನ ಪ್ರಯಾಣ ಮಾಡಬಹುದು ನನಗೆ ನಿಖರವಾಗಿ ಗೊತ್ತಿಲ್ಲ. ಕ್ರೂಸರ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ನಿಪಿ-**11** ರಲ್ಲಿ ಕಾಣಿಸುವ ನಕಾಶೆಯಲ್ಲಿ ಕೆಂಪು ಬಣ್ಣದಲ್ಲಿ ಘಟನಾ ಸ್ಥಳ ತೋರಿಸಿರುತ್ತೇವೆ ಎಂದರೆ ಸರಿ. ನಾವು ನಕಾಶೆಯಲ್ಲಿ ತೋರಿಸಿರುವ ಚುಕ್ಕೆಗಳು ಡಿವೈಡರ ಮಾರ್ಕ ಎಂದರೆ ಸರಿಯಲ್ಲ. ರಸ್ತೆ ತೋರಿಸುವಾಗ ಸುಮ್ಮನೆ ಚುಕ್ಕೆಗಳನ್ನು ತೋರಿಸಿರುತ್ತಾರೆ.

ಈಗಲೂ ಸ್ಥಳದಲ್ಲಿ ಡಿವೈಡರ ಮಾರ್ಕ್ಸ ಇರುತ್ತವೆ ಎಂದರೆ ನಾನು ನೋಡಿರುವುದಿಲ್ಲ. ಆಳಂದದಿಂದ ಕಲಬುರಗಿ ಹೋಗುವ ಸಮಯದಲ್ಲಿ ಸದರಿ ಕೆಂಪು ಬಣ್ಣ ಬಲಗಡೆಗೆ ಬರುತ್ತದೆ ಎಂದರೆ ಸಾಕ್ಷಿ ಮಧ್ಯದಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ಬಿಳಿ ಡಿವೈಡರ ಮಾರ್ಕದಿಂದ ಎಷ್ಟು ಅಂತರದಲ್ಲಿ ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿ ಅಪಘಾತ ಮಧ್ಯದಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನಕಾಶೆಯನ್ನು ನೋಡಿದಾಗ ಡಿವೈಡರನಿಂದ ಬಲಗಡೆ ಅಪಘಾತ ಆಗಿದ್ದು ಕಾಣಿಸುತ್ತದೆ ಎಂದರೆ ಸರಿಯಲ್ಲ. ಕ್ರೂಸರ ಆಳಂದದಿಂದ ಹೋಗುವಾಗ ಬಲಗಡೆ ಹೋಗಿದ್ದರಿಂದ ನಾವು ಘಟನಾ ಸ್ಥಳ ಬಲಗಡೆ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಹೇಳಿದ ಸ್ಥಳಕ್ಕೂ ನಕಾಶೆಗೂ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಕಾಶೆ ನೋಡಿದರೆ ಕ್ರೂಸರ ವಾಹನವೇ ಬಲಗಡೆಗೆ ಹೋಗಿ ಡಿಕ್ಕಿಪಡಿಸಿರುತ್ತಾನೆ ಎಂದು ಕಂಡು ಬರುತ್ತದೆ ಎಂದರ ಸರಿಯಲ್ಲ. ನಾವು ಕ್ರೂಸರ ಚಾಲಕ ಹಾಗೂ ಮಾಲಕನ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಕ್ರೂಸರ ಚಾಲಕ ಯಾರಿದ್ದರು ಎಂದು ಅವರ ಪರಿಶೀಲನೆ ಮಾಡಿರುತ್ತೇನೆ. ಚಾಸಾ-**28** ರವರು ಚಾಲಕ ಇರುತ್ತಾರೆ. ಗಾಯಾಳುಗಳು ಹಾಗೂ ಮೃತರ ಕುಟುಂಬಗಳು ಪರಿಹಾರ ಧನಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲಾರಿ ಚಾಲಕನ ತಪ್ಪಿನಿಂದ ಈ ಘಟನೆ ನಡೆದಿರುವುದಿಲ್ಲ ಕ್ರೂಸರ ಚಾಲಕ ಹೆಚ್ಚಿನ ಪ್ರಯಾಣಿಕರನ್ನು ತುಂಬಿಕೊಂಡು ಹೋಗುತ್ತಿದ್ದರಿಂದ ನಿಯಂತ್ರಣ ತಪ್ಪಿ ಅವನೇ ಬಂದು ಲಾರಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ.

ದಿ.19.07.2019 ರಂದು ಚಾಸಾ-42 ರವರಿಂದ ಕಡತವನ್ನು ಸ್ವಿಕರಿಸಿ ಪರಿಶೀಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಕಲಬುರಗಿ ಜಿಲ್ಲಾಸ್ಪತ್ರೆ ಶವಾಗಾರಕ್ಕೆ ಭೇಟಿ ನೀಡಿ ಮೃತ ಫುಲಚಂದ ರವರ ಶವವನ್ನು ಚಾಸಾ-3 ಮತ್ತು 4 ರವರ ಸಮಕ್ಷಮ ಶವಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ದೇಹವನ್ನು ಶವಪರಿಕ್ಷೆಗಾಗಿ ಕಳುಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಮೃತರಾದ ಗಜ್ಜಾಬಾಯಿ ಗಂಡ ಶ್ರೀಮಂತ ಇಂಗಳೆರವರ ಶವ ಪಂಚನಾಮೆಯನ್ನು ಚಾಸಾ-2 ರಿಂದ 4 ರವರ ಸಮಕ್ಷಮ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಶವಪರಿಕ್ಷೆಗಾಗಿ ಮೃತ ದೇಹವನು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-45 ರವರಿಂದ ಮೌಲಿ ಅಲಿಯಾಸ ಕೃಷ್ಣ ಬಳಿರಾಮರವರ ಶವಪಂಚನಾಮೆ ಮಾಡಲು ಆದೇಶ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಶವಪಂಚನಾಮೆ ಮಾಡಿ ಶವಪರಿಕ್ಷೆ ಮಾಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-44 ರವರು ಮೃತ ಸಂಜಯ ತಂದೆ ಶಿವಾಜಿ ಇಂಗಳೆ ಮತ್ತು ಕೃಷ್ಣ ತಂದ ಸಂಜಯ ಇಂಗಳೆರವರ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-49 ರವರು ಸರ್ಜಾಬಾಯಿ ಗಂಡ ಪಂಡರಿ ಆಳಂದೆ ಮತ್ತು ಶ್ರೀಮತಿ ಕಾಂತಾಬಾಯಿ ಶಿವಾಜಿ ಇಂಗಳೆರವರ ಶವ ಪಂಚನಾಮೆ ಮಾಡಿ ಶವಪರಿಕ್ಷೆಗೆ ದೇಹವನ್ನು ಸಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-50 ರವರು ವರ್ಷಾ ಗಂಡ ಪ್ರಭಾಕರ ಡೋಬಳೆ, ಸ್ವಪ್ನಿಲ್ ತಂದೆ ಪ್ರಭಾಕರ ಡೋಬಳೆ ಇವರ ಶವ ಪಂಚನಾಮೆ ಮಾಡಿ ಶವಪರಿಕ್ಷೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ದೇಹವನ್ನು ಸಂಬಂಧಿಕರಿಗೆ ಸಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.20.07.2016 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-15, 16 ರವರ ಸಮಕ್ಷಮ 10.00 ರಿಂದ 11.00 ರ ವರೆಗೆ ಪಂಚನಾಮೆಯನ್ನು ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಿಂದ ಎಂಎಚ್-12/ಎಲಟಿ-7368 ಲಾರಿ ಮತುತ ಎಂಎಚ-28/ಆರ-4583 ಕ್ರೂಸರ ವಾಹನಗಳನ್ನು ಐಎಂವಿಗಾಗಿ ವಶಪಡಿಸಿಕೊಳ್ಳಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿದೆನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಸರ್ಕಾರಿ ಆಸ್ಪತ್ರೆ ಕಲಬುರಗಿಗೆ ಭೇಟಿ ನೀಡಿ ಗಾಯಾಳುಗಳಾದ ಚಾಸಾ-18 ರಿಂದ 20 ಹಾಗೂ ವೆಂಕಟರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಯುನೈಟೆಡ ಅಸ್ಪತ್ರೆಗೆ ಭೇಟ ನೀಡಿ ಚಾಸಾ-21, 22 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಕಚೇರಿಗೆ ಬಂದು ಚಾಸಾ-23, 24, 25 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.21.07.2016 ರಂದು ಸಿಬ್ಬಂದಿಗಳಾದ ಚಾಸಾ-39, 47 ಹಾಗೂ ಪ್ರಶಾಂತ, ಚಾಸಾ-40, 46, ಚಂದ್ರಾಮ ಸಿಪಿಸಿ-629, 48, 43 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.25.07.2016 ರಂದು ಆರೋಪಿಯನ್ನು ದಸ್ತಗೀರಿ ಮಾಡಿ ದೂರುದಾರರಿಗೆ ಹಾಗೂ ಸಾಕ್ಷಿದಾರರಿಗೆ ತೋರಿಸಿದ್ದು ಅವರು ಗುರುತಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಅಪಘಾತವಾದ ವಾಹನಗಳ ಐಎಂವಿ ಪರಿಕ್ಷೆಯನ್ನು ಮಾಡಿಸಿ ನಂತರ ಎಂಎಚ-12/ಎಲಟಿ-7368 ಲಾರಿಯನ್ನು ಪವರ ಆಫ ಅಟಾರ್ನಿ ಹೋಲ್ಡರರವರಿಂದ ದಾಖಲಾತಿ ಪಡೆದು ಹಾಗೂ ಇಂಡಿಮನಿಟಿ ಬಾಂಡ ಪಡೆದು ವಾಹನ ಬಿಡುಗಡೆ ಮಾಡಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಫಿರ್ಯಾದಿ, ಚಾಸಾ-18, 19, 20, 17, 23 ರಿಂದ 26 ರವರ ಮುಂದುವರೆದ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.19.8.2016 ರಂದು ಚಾಸಾ-27,28 ರವರ ಹೇಳಿಕೆ ಪುರವಣಿ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರೂಸರ ಮಾಲೀಕನಾದ

ಹರಿರಾಮರವರಿಂದ ಇಂಡಿಮನಿಟಿ ಬಾಂಡ ಪಡೆದು ವಾಹನ ಬಿಡುಗಡೆ ಮಾಡಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಮೃತರಾದ ಮೌಲಿ ಅಲಿಯಾಸ ಕೃಷ್ಣ, ಫೂಲಚಂದ, ಗಜ್ಜಾಬಾಯಿ, ಸಂಜಯ, ಕೃಷ್ಣ ತಂದೆ ಸಂಜಯ, ಸರ್ಜಾಬಾಯಿ, ಕಾಂತಾಬಾಯಿ, ವರ್ಷಾ ಹಾಗೂ ಸ್ವಪ್ನಿಲ್ ರವರ ಪಿಎಂ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.26.08.2016 ರಂದು ವಾಹನಗಳ ಐಎಂವಿ ವರದಿ ಪಡೆದಿರುತ್ತೇನೆ, ಅದೇ ದಿನ ಗಾಯಾಳುಗಳಾದ ಕುನಾಲ, ಚಾಸಾ-27, 21, ಅಭಿಜಿತ, 28, 19, ಸಮೀಕ್ಷಾ, 22, ಚಾಸಾ-1, ಪಾಂಡುರಂಗ, ಮೌಲಿ, 20, 17, 18 ರವರ ಗಾಯದ ಪ್ರಮಾಣ ಪತ್ರ ಯುನೈಟೆಡ ಅಸ್ಪತ್ರೆ ಕಲಬುರಗಿಯಿಂದ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.03.12.2016 ರಂದು ಆರೋಪಿತರ ವಿರುದ್ಧ ದೊ.ಪ. ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಈ ಘಟನೆ ನಡೆದಿರುವುದಿಲ್ಲ ಕ್ರೂಸರ ಚಾಲಕ ಹೆಚ್ಚಿನ ಪ್ರಯಾಣಿಕರನ್ನು ತುಂಬಿಕೊಂಡು ಹೋಗುತ್ತಿದ್ದರಿಂದ ನಿಯಂತ್ರಣ ತಪ್ಪಿ ಅವನೇ ಬಂದು ಲಾರಿಗೆ ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.